**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 34/2025**

**ಪಿ.ಡಬ್ಲ್ಯೂಃ 10 (ಸಿಡಬ್ಲ್ಯೂಃ22 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಪ್ರಸನ್ನ ಹವಳದ** |
| **ತಂದೆಯ ಹೆಸರು** | : | **ವಿರೇಶ್** |
| **ವಯಸ್ಸು** | : | **33 ವರ್ಷ** |
| **ಕೆಲಸ** | : | **ವೈಜ್ಞಾನಿಕ ಅಧಿಕಾರಿ , ಆರ್.ಎಫ್.ಎಸ್.ಎಲ್ , ಬೆಳಗಾವಿ** |
| **ವಾಸ ಸ್ಥಳ** | : | **ಬೆಳಗಾವಿ** |

**ಸಾಕ್ಷಿಗೆ ದಿನಾಂಕ 12.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಸಾಕ್ಷಿ ವಿಚಾರಣೆಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ತೆಗೆದುಕೊಳ್ಳಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ3.8.2023 ರಿಂದ ದಿಃ21.4.2025 ರವರೆಗೆ ಆರ್.ಎಫ್.ಎಸ್.ಎಲ್ ಬಳ್ಳಾರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿಃ10.3.2025 ರಂದು ಹಚ್ಚೋಳ್ಳಿ ಪೊಲೀಸರು ಕ್ರೈಂ ನಂಃ14/2025 ಕ್ಕೆ ಸಂಬಂಧಿಸಿದಂತೆ 4 ವಸ್ತುಗಳಾದ 1 ಸೀರೆ , 1 ಕುಪ್ಪಸ , 1 ಈಳಿಗೆ ಮಣೆ , 1 ಶರ್ಟ್ ನ್ನು ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದರು. ನಾನು ಸದರಿ ವಸ್ತುಗಳಿಗೆ ರಕ್ತ ಅಂಟಿದೆಯೋ

ಎನ್ನುವುದನ್ನು ಪರಿಶೀಲಿಸಿದ್ದೇನೆ. ನನಗೆ ಕಳುಹಿಸಿಕೊಟ್ಟ 4 ವಸ್ತುಗಳ ಮೇಲೆ ರಕ್ತದ ಕಣಗಳು ಕಂಡು ಬಂದಿರುತ್ತದೆ. ಈ ಬಗ್ಗೆ ನಾನು ಅಭಿಪ್ರಾಯವನ್ನು ನೀಡಿದ್ದೇನೆ. ನಾನು ನೀಡಿದ ವರದಿಯನ್ನು ಗುರುತಿಸುತ್ತೇನೆ. ವರದಿಯನ್ನು **ನಿಪಿ.13** ಎಂದು ಗುರುತಿಸಲಾಯಿತು. ನಾನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ 4 ವಸ್ತುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಎಂಒ 1 ರಿಂದ 4 ಎಂದು ಗುರುತಿಸಲಾಗಿದೆ. ಎಂಒ 1 ರಿಂದ 4 ರ ಮೇಲೆ ಮಾನವ ರಕ್ತದ ಅಂಶ ಕಂಡು ಬಂದಿದ್ದು ಅವುಗಳು " ಬಿ " ಗುಂಪಿಗೆ ಸೇರಿದ್ದಾಗಿರುತ್ತದೆ.

**ಪಾಟೀಸವಾಲುಃ ಶ್ರೀಮತಿ ಹೆಚ್.ಆರ್.ಜೆ.(ಎಲ್ಎಡಿಸಿ) ವಕೀಲರು ಆರೋಪಿ ಪರವಾಗಿಃ**

**3.** ಎಂಒ 1 ರಿಂದ 4 ವಸ್ತುಗಳನ್ನು ದಿಃ28.2.2025 ರಂದು ಜಪ್ತು ಮಾಡಿಕೊಡಿಂದ್ದು ನಮ್ಮ ಕಚೇರಿಗೆ ದಿಃ10.3.2025 ರಂದು ಕಳುಹಿಸಿಕೊಟ್ಟಿದ್ದು ಈ ಅವಧಿಯಲ್ಲಿ ಎಂಒ 1 ರಿಂದ 4 ಕಂಟಾಮಿನೇಟೇಡ್ ಆಗುವ ಸಾಧ್ಯತೆ ಇದೆ ಎನ್ನುವುದು ಸರಿಯಲ್ಲ. ಬೆನ್ಜಮಿನ್ ಟೆಸ್ಟ್ ಎನ್ನುವುದು ಊಹೆಯ ಮೂಲಕ ಮಾಡುವ ಪರೀಕ್ಷೆ ಆಗಿದೆ ಎನ್ನುವುದು ಸರಿ . ಈ ಪರೀಕ್ಷೆಯಲ್ಲಿ ರಕ್ತದ ವಯಸ್ಸು ಹೇಳಲು ಆಗುವುದಿಲ್ಲ ಎನ್ನುವುದು ಸರಿ . ಬೆನ್ಜಮಿನ್ ಟೆಸ್ಟ ನಲ್ಲಿ ಯಾವ ಸಮಯದಲ್ಲಿ ರಕ್ತದ ಕಲೆ ಮುದ್ದೆಮಾಲುಗಳ ಮೇಲೆ ಅಂಟಿದೆ ಎಂದು ಬೆನ್ಜಮಿನ್ ಟೆಸ್ಟ ಮೂಲಕ ನಿಖರವಾಗಿ ಹೇಳಲು ಆಗುವುದಿಲ್ಲ ಮತ್ತು ಯಾವ ಸಮಯದಲ್ಲಿ ಅದು ಎಂಒ 1 ರಿಂದ 4 ರ ಮೇಲೆ ಅಂಟಿರುತ್ತದೆ ಎಂದು ಹೇಳಲು ಆಗುವುದಿಲ್ಲ.

**SC.No. 34-2025**
**P.W.10 (C.W.22)**
**Date : 12.02.2026**

**4.** ನಾನು ಡಿ.ಎನ್.ಎ ಟೆಸ್ಟ್ ಮಾಡಿಲ್ಲ. ಬಿ ರಕ್ತದ ಗುಂಪು ಸಾಮಾನ್ಯವಾಗಿ ಹೆಚ್ಚಿನ ಜನರಲ್ಲಿ ಕಂಡು ಬರುತ್ತದೆ ಎನ್ನುವುದು ಸರಿಯಲ್ಲ. ನಾನು ಆರೋಪಿ ಅಥವಾ ಗಾಯಾಳುವಿನ ರಕ್ತದ ಮಾದರಿಯನ್ನು ಪಡೆದುಕೊಂಡಿಲ್ಲ. ಈಳಿಗೆ ಮಣೆಯ ಮೇಲೆ ಮಾಂಸದ ಕಣಗಳು ಕಂಡು ಬಂದಿದೆಯೋ ಎಂದು ನಾನು ಪರಿಶೀಲಿಸಿಲ್ಲ. ವಸ್ತು ಸಂಖ್ಯೆ 2 ರ ಮೇಲೆ ಎಲ್ಲಿ ರಕ್ತದ ಕಣ ಕಂಡು ಬಂದಿದೆ ಎಂದು ನಾನು ನನ್ನ ವರದಿಯಲ್ಲಿ ಹೇಳಿಲ್ಲ. ವಸ್ತುಸಂಖ್ಯೆ 1, 2 ಮತ್ತು 4 ರ ಬಣ್ಣವನ್ನು ಹೇಳಿಲ್ಲ. ಮಹಜರ್ ವರದಿಯ ಆಧಾರದ ಮೇಲೆ ನಾನು ಸುಳ್ಳು ವರದಿಯನ್ನು ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**